**OS-405/2017 D.W.1**

ದಿನಾಂಕ 13.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು</u>** ಃವಾದಿಯ ಪರ ವಕೀಲರಿಂದ ಃ-

ಮಲ್ಲಿಕಾರ್ಜುನಪ್ಪ ನನ್ನ ತಂದೆ ಎಂದರೆ ಸರಿ. ಭಗಿರಥಮ್ಮ ನನ್ನ ತಾಯಿ ಎಂದರೆ ಸರಿ. ಸದರಿಯವರು ಅಬ್ಬಿನಹೊಳಲು ಗ್ರಾಮದಲ್ಲಿ ಮೊದಲಿನಿಂದಲೂ ವಾಸವಾಗಿರುತ್ತಾರೆ ಎಂದರೆ ಸರಿ. ನಿಪಿ9 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಕಾಣುವ ಸಹಿಯು ನನ್ನ ತಂದೆಯ ಸಹಿ ಎಂದರೆ ಸಾಕ್ಷಿ ಇದ್ದರೂ ಇರಬಹುದು ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ತೋರಿಸಿದ ಸದರಿ ಸಹಿಯನ್ನು ನಿಪಿ9 ಎ ಎಂದು ಗುರುತಿಸಲಾಯಿತು. 1965 ರಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ರವರು ನಿರ್ಮಾಣ ಮಾಡಿದ 17 ಮನೆಗಳಲ್ಲಿ 1 ಮನೆಯನ್ನು ನನ್ನ ತಂದೆಗೆ ಕೊಟ್ಟಿದ್ದರು ಎಂದರೆ ಸರಿ. ಸದರಿ ಮನೆಯ ಪೂರ್ವಕ್ಕೆ ಕೃಷ್ಣಮೂರ್ತಿ ರವರ ಮನೆ, ಪಶ್ಚಿಮಕ್ಕೆ ರಾಮಜ್ಜನ ತೋಟ, ಉತ್ತರಕ್ಕೆ ಬುಕ್ಕಾಂಬೂದಿ ರಸ್ತೆ ಮತ್ತು ದಕ್ಷಿಣಕ್ಕೆ ಖಾಲಿ ನಿವೇಶನ ಬರುತ್ತದೆ. ಸದರಿ ಖಾಲಿ ನಿವೇಶನ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗೆ ಸಂಬಂಧಪಟ್ಟಂತೆ ಹಣವನ್ನು ಪುರಸಭೆಗೆ ಕಂತಿನ ರೂಪದಲ್ಲಿ ಪ್ರತಿ ವರ್ಷ ಕಟ್ಟಬೇಕೆಂದು ಒಪ್ಪಿಕೊಂಡಿದ್ದರು ಎಂದರೆ ಸರಿ. 1965-66, 1968-69 ಮತ್ತು 1969-70 ರಲ್ಲಿ ಸದರಿ ಕಂತನ್ನು ಕಟ್ಟದಿದ್ದಲ್ಲಿ ಮನೆಯನ್ನು ಖಾಲಿ ಮಾಡಿಸುತ್ತೇವೆಂದು ನೋಟೀಸ್ ಅನ್ನು ಪುರಸಭೆಯವರು ನನ್ನ ತಂದೆಗೆ ಕೊಟ್ಟಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ 1965 ರಿಂದ 1970 ರವರೆಗೆ ಕಟ್ಟಬೇಕಾದ ಹಣವನ್ನು ಕಟ್ಟದೇ ಬಾಕಿ ಉಳಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿ ಹೋಗಿ 10-13 ವರ್ಷ ಆಗಿದೆ, ಆದರೆ ನನಗೆ ಯಾವ ವರ್ಷ ಎಂದು ರೈತನಾದ ಕಾರಣ ಹೇಳಲು ಬರುವುದಿಲ್ಲ. ನನಗೆ ಈಗ 64 ವರ್ಷ ವಯಸ್ಸು. ನನ್ನ ತಂದೆ ತೀರಿಕೊಂಡಾಗ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಆ ಬಗ್ಗೆ ಹೇಳಲು ಸಾಧ್ಯವಾಗುತ್ತಿಲ್ಲ. ನನ್ನ ತಂದೆಯ ಅಂತಿಮ ಕ್ರಿಯೇಯನ್ನು ಅಬ್ಬಿನಹೊಳಲು ಗ್ರಾಮದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ತೀರಿ ಹೋಗಿದ್ದು ಯಾವ ವರ್ಷ ಎಂದು ನನಗೆ ಗೊತ್ತಿಲ್ಲ. ಅವರನ್ನು ಸಹ ಅಬ್ಬಿನಹೊಳಲು ಗ್ರಾಮದಲ್ಲಿ ಅಂತಿಮ ಕ್ರಿಯೆ ಮಾಡಿದ್ದರು ಎಂದರೆ ಸರಿ. ನನ್ನ ತಾಯಿ ತೀರಿಕೊಂಡಾಗ ಅವರು ಅಬ್ಬಿನಹೊಳಲು ಗ್ರಾಮದಲ್ಲಿಯೇ ಇದ್ದರು ಎಂದರೆ ಸರಿ. ಆನಂತರ ನಾನು ಮತ್ತು 2 ನೇ

ಪ್ರತಿವಾದಿ ಅಬ್ಬಿನಹೊಳಲು ಗ್ರಾಮದಲ್ಲಿ ವಾಸವಿದ್ದು ಉಳಿದ 3 ಜನ ಸಹೋದರರು ಹೊರಗಡೆ ವಾಸವಿರುತ್ತಾರೆ. ನನ್ನ ತಂದೆ ಸದರಿ ಮನೆಗೆ ಕಂತುಗಳನ್ನು ಪಾವತಿ ಮಾಡಲು ಸಾಧ್ಯವಾಗದೇ ದಿಃ 08.07.1971 ರಂದು ಲಕ್ಷ್ಮಣ ಶೆಟ್ ಯಾನೆ ಲಕ್ಷ್ಮಣಾಚಾರ್ ರವರಿಗೆ ಕ್ರಯ ಕರಾರು ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 2318/- ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಲಕ್ಷ್ಮಣಾಚಾರ್ ರವರು ಮತ್ತು ನಮ್ಮ ತಂದೆ ಚೆನ್ನಾಗಿ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯನ್ನು ನನ್ನ ತಂದೆ ಲಕ್ಷ್ಮಣಾಚಾರ್ ರವರಿಗೆ ಬಾಡಿಗೆಗೆ ಕೊಟ್ಟಿರುತ್ತೇನೆಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ9 ರ ಕ್ರಯ ಕರಾರು ಪತ್ರವನ್ನು ನನ್ನ ತಂದೆ ಸದರಿ ಲಕ್ಷ್ಮಣಾಚಾರ್ ರವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಾಡಿಗೆಗೆ ಕೊಟ್ಟಿರುತ್ತೇನೆಂದು ಪತ್ರವನ್ನು ಬರೆದುಕೊಟ್ಟಿರುತ್ತೇನೆಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ದಿಃ 09.07.1971 ರಲ್ಲಿ ಲಕ್ಷ್ಮಣಾಚಾರ್ ರವರು ದಾವಾ ಆಸ್ತಿಗೆ ಸಂಬಂಧಪಟ್ಟ ಪುರಸಭೆಗೆ 800/- ರೂ ಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ. 1518/- ರೂಪಾಯಿಗಳನ್ನು ಪುರಸಭೆ ಕಟ್ಟಿಕೊಂಡು ಹೋಗುವಂತೆ ಹೇಳಿ ದಾವಾ ಆಸ್ತಿಯ ಸ್ವಾಧೀನವನ್ನು ಲಕ್ಷ್ಮಣಾಚಾರ್ ರವರಿಗೆ ನನ್ನ ತಂದೆ ಬಿಟ್ಟು ಕೊಟ್ಟಿದ್ದರು ಎಂದರೆ ಸಾಕ್ಷಿ ನೀಡಬೇಕಾದ ಬಾಡಿಗೆಯನ್ನು ಪುರಸಭೆಗೆ ಕಟ್ಟುವಂತೆ ಹೇಳಿ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಿಪಿ6 ರಿಂದ 47 ರವರೆಗಿನ ರಶೀದಿಗಳಂತೆ ಸದರಿ ಲಕ್ಷ್ಮಣಾಚಾರ್ ಹಾಗೂ ಗೋವಿಂದಾಚಾರ್ ರವರು ಕಂತುಗಳನ್ನು ಹಾಗೂ ದಾವಾ ಆಸ್ತಿಯ ಕಂದಾಯವನ್ನು ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ಬಾಡಿಗೆಯನ್ನು ಆ ರೀತಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 21.11.1974 ರಲ್ಲಿ ದಾವಾ ಅಸ್ತಿಯನ್ನು ಲಕ್ಷ್ಮಣಾಚಾರ್ ರವರು ಅವರ ತಮ್ಮ ಗೋವಿಂದಾಚಾರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1974 ರಿಂದ ಮೊದಲು ಗೋವಿಂದಾಚಾರ್ ರವರು ಇದ್ದು ಈಗ ಅವರ ಮಕ್ಕಳಾದ ವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಹಾಗಿದ್ದರೂ ಸಹ 29.11.2011 ರಲ್ಲಿ ನಾನು ಮತ್ತು ನನ್ನ ತಾಯಿ ದಾವಾ ಆಸ್ತಿಯನ್ನು ಬಿಟ್ಟು ಕೊಡುವಂತೆ ಅವರಿಗೆ ತೊಂದರೆಯನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆನಂತರ ವಾದಿಯರ ತಂದೆ ಗೋವಿಂದಾಚಾರ್ ರವರು ನನ್ನ ತಾಯಿಯ ವಿರುದ್ಧ ಅಸಲು ದಾವಾ

282/2011 ರಂತೆ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವಾ ಚಾಲ್ತಿಯಲ್ಲಿ ಇರುವಾಗ 2017 ರಲ್ಲಿ ನನ್ನ ತಾಯಿ ತೀರಿಕೊಂಡರು ಎಂದರೆ ಸರಿ. ಸದರಿ ದಾವೆಯು ಪ್ರತಿವಾದಿಯ ವಾರಸುದಾರರನ್ನು ತರದೇ ಇರುವ ಕಾರಣ ಕೊನೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ವಿರುದ್ದ ಕೇಸನ್ನು ಹಾಕಲು ಆ ರೀತಿ ಕೊನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1971 ರಲ್ಲಿ ಲಕ್ಷ್ಮಣಾಚಾರ್ ರವರು ದಾವಾ ಅಸ್ತಿಯ ಖಾತೆಯನ್ನು ಮಾಡಿಕೊಡುವಂತೆ ಅರ್ಜಿಯನ್ನು ಪುರಸಭೆಗೆ ಕೊಟ್ಟಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 1974 ರಲ್ಲಿ ಗೋವಿಂದಾಚಾರ್ ರವರು ದಾವಾ ಅಸ್ತಿಯ ಖಾತೆಯನ್ನು ಮಾಡಿಕೊಡುವಂತೆ ಅರ್ಜಿಯನ್ನು ಪುರಸಭೆಗೆ ಕೊಟ್ಟಿದ್ದರು ಮತ್ತು ಸದರಿ ಅರ್ಜಿಗೆ ನಾನು ತಕರಾರನ್ನು ಸಲ್ಲಿಸಿದ್ದೆನು ಎಂದರೆ ಸರಿ. ಅಸಲು ದಾವಾ 282/2011 ಚಾಲ್ತಿಯಲ್ಲಿ ಇರುವಾಗ ನಾನು ರಾಜಕೀಯ ಪ್ರಭಾವ ಬೀರಿ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿಯರ ತಂದೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವಾಗ ಅದರ ದಕ್ಷಿಣದ ನಿವೇಶನವನ್ನು ಪುರಸಭೆಯವರು ಅವರಿಗೆ ಮಂಜೂರು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿವೇಶನ ಗೋವಿಂದಾಚಾರ್ ರವರಿಗೆ ಮಂಜೂರಾದ ನಿವೇಶನ ಎಂದು ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು 1971 ರಲ್ಲಿ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ವಿದ್ಯುತ್ ಬಿಲ್ ಅನ್ನು ವಾದಿಯರು ಮತ್ತು ಅವರ ತಂದೆ ಕಟ್ಟಿರುತ್ತಾರೆ ಎಂದರೆ ಬಾಡಿಗೆಗೆ ಕೊಟ್ಟ ಕಾರಣ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಅವರಿಗೆ ಬಾಡಿಗೆ ಕೊಟ್ಟ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ದಿಃ 23.06.2017 ರಂದು ಪುನಃ ನಾನು ವಾದಿಯ ಸ್ವಾಧೀನಕ್ಕೆ ಖಾತೆ ಬದಲಾವಣೆ ಮಾಡಿಕೊಂಡ ನಂತರ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಿಡಿ1 ರ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ದಾಖಲೆಯನ್ನು ನಾವು ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಯಾವತ್ತು ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿ

ಇಲ್ಲದೇ ಇದ್ದರೂ ಸಹ ದಾವಾ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

Sd/-

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.